ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

20ನೇ ಮಹಡಿ, ವಿ.ವಿ. ದೊಡ್ಡಗೋಪುರ,
ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-01
ಕಛೇರಿ : 080-22864212 / ಫ್ಯಾಕ್ಸ್ : 080-22863618
ವೆಬ್‌ಸೈಟ್: www.gokdom.com
ಇ-ಮೇಲ್: directorgokdom@gmail.com

ಸಂಖ್ಯೆ: ಅಸಂನಿ/ಮೊದೇವಶಾ/ವಿನಿ/ಸಿಆರ್-62/2014-15 ದಿನಾಂಕ: 26/07/2014

# ಸುತ್ತೋಲೆ

ವಿಷಯ: **ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ, ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿನಿಯರ ಸುರಕ್ಷತಾ ಹಾಗೂ ರಕ್ಷಣಾತ್ಮಕ ಕ್ರಮಗಳ ಬಗ್ಗೆ.**

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಅಲ್ಪಸಂಖ್ಯಾತರ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳ, ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿನಿಯರ ಈ ಕೆಳಕಂಡ ಸುರಕ್ಷತಾ ಹಾಗೂ ರಕ್ಷಣಾತ್ಮಕ ಕ್ರಮಗಳ ಬಗ್ಗೆ **ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಾಸ್ಟೆಲ್‌ಗಳಲ್ಲಿ** ಕೂಡಲೇ ಕ್ರಮವಹಿಸಲು ಸೂಚಿಸಿದೆ.

1) ಎಲ್ಲಾ ಹಾಸ್ಟೆಲ್‌ಗಳಲ್ಲಿ ಅಲ್ಪಸಂಖ್ಯಾತರ ಅರಿವು ಮೂಡಿಸುವ ಕೇಂದ್ರದ ಮೂಲಕ ಪೋಲೀಸ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳ ಸಹಯೋಗದೊಂದಿಗೆ ಹೆಣ್ಣು ಮಕ್ಕಳ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲು ಕ್ರಮವಹಿಸುವುದು.

2) ಹೆಣ್ಣುಮಕ್ಕಳ ಸುರಕ್ಷತೆಗೆ ವಿವಿಧ ಇಲಾಖೆಗಳು ತೆರೆದಿರುವ ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆಯನ್ನು ಎಲ್ಲಾ ಹಾಸ್ಟೆಲ್‌ಗಳಲ್ಲಿ ಪ್ರದರ್ಶಿಸಿ, ಅದನ್ನು ಬಳಸಿಕೊಳ್ಳುವ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸುವುದು.

**ಉದಾ:- ಪೋಲೀಸ್ ಇಲಾಖೆ – 100, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ – 1098.**

3) ಮೊರಾರ್ಜಿದೇಸಾಯಿವಸತಿಶಾಲೆ/ಕಾಲೇಜು/ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣು ಮಕ್ಕಳ ಪೋಷಕರು ತಿಂಗಳಿಗೊಮ್ಮೆಯಾದರೂ ವಸತಿನಿಲಯಗಳಿಗೆ ಭೇಟಿ ನೀಡಿತಮ್ಮ ಮಕ್ಕಳ ಯೋಗಕ್ಷೇಮದ ಬಗ್ಗೆ ವಿಚಾರಿಸಲು ಸೂಚಿಸುವುದು. ಈ ಸಂದರ್ಭದಲ್ಲಿ ಹೆಣ್ಣು ಮಕ್ಕಳ ಪೋಷಕರುಗಳ ಜೊತೆ ಪ್ರಾಂಶುಪಾಲರು ಚರ್ಚಿಸಿ ಹೆಣ್ಣು ಮಕ್ಕಳ ಸುರಕ್ಷತೆ ಬಗ್ಗೆ ಭರವಸೆ ನೀಡಿ ಸಮಸ್ಯೆಗಳೇನಾದರೂ ಇದ್ದಲ್ಲಿಕೂಡಲೇ ಬಗೆಹರಿಸುವುದು.

4) ಮೊರಾರ್ಜಿದೇಸಾಯಿ ವಸತಿ ಶಾಲೆ/ಕಾಲೇಜು/ವಿದ್ಯಾರ್ಥಿನಿಲಯಗಳಲ್ಲಿ ಸಿ.ಸಿ ಟಿ.ವಿ ಕ್ಯಾಮರಾಗಳನ್ನು ಅಳವಡಿಸುವುದು ಹಾಗೂ ಸ್ಥಳೀಯ ಪೋಲೀಸ್‌ಠಾಣೆಯೊಂದಿಗೆ ಸಂಪರ್ಕವನ್ನುಇಟ್ಟುಕೊಂಡುತುರ್ತು ಸಮಯದಲ್ಲಿಅವರ ಸೇವೆ ಪಡೆಯುವುದು ಮತ್ತು ಶಾಲೆಯ ಹೆಸರು ವಿಳಾಸದ ಮಾಹಿತಿಯನ್ನುಠಾಣೆಗೆ ನೀಡುವುದು.

5) ಮೊರಾರ್ಜಿದೇಸಾಯಿ ವಸತಿ ಶಾಲೆ/ಕಾಲೇಜು/ವಿದ್ಯಾರ್ಥಿನಿಲಯಗಳ ಆಡಳಿತ ಮಂಡಳಿಯ ಪದಾಧಿಕಾರಿಗಳ ಹೆಸರು, ವಿಳಾಸ ಠಾಣೆಯಲ್ಲಿದಾಖಲಿಸುವುದು. ಶಿಕ್ಷಕರು ಇನ್ನಿತರ ಸಿಬ್ಬಂದಿ ವಿವರವನ್ನು ಕಾಲಕಾಲಕ್ಕೆ ಸ್ಥಳೀಯ ಪೋಲಿಸ್ ಠಾಣೆಗೆ ಪ್ರಾಂಶುಪಾಲರುಒದಗಿಸುವುದು.

6) ಮಕ್ಕಳನ್ನು ತುರ್ತಾಗಿ ಹೊರಗಡೆ ಕಳುಹಿಸುವ ಸಂದರ್ಭ ಬಂದಾಗ ಮಹಿಳಾ ಸಿಬ್ಬಂದಿಯೊಂದಿಗೆ ಕಳುಹಿಸುವುದು. ವಿದ್ಯಾರ್ಥಿನಿಯರು ಒಂಟಿಯಾಗಿ ಪುರುಷ ಸಿಬ್ಬಂದಿಯೊಂದಿಗೆ ಇರದಂತೆ ಜಾಗೃತಿ ವಹಿಸುವುದು.

7) ಮೊರಾರ್ಜಿದೇಸಾಯಿ ವಸತಿ ಶಾಲೆ/ಕಾಲೇಜು/ವಿದ್ಯಾರ್ಥಿನಿಲಯಗಳಲ್ಲಿ ಬಾಲಕಿಯರು ಮೊಬೈಲ್ ಬಳಸುತ್ತಿದ್ದಲ್ಲಿ, ಮೊಬೈಲ್ ಬಳಕೆಯ ಬಗ್ಗೆ ನಿಲಯ ಮೇಲ್ವಿಚಾರಕರುಗಮನಹರಿಸುವುದು. ಒಂದು ವೇಳೆ ಮೊಬೈಲ್‌ಗಳಿಗೆ ಅಶ್ಲೀಲ ಸಂದೇಶ, ದೃಶ್ಯತುಣುಕು ಬಂದರೆಕೂಡಲೇ ಸ್ಥಳೀಯ ಠಾಣೆಗೆದೂರು ನೀಡುವುದು.

8) ಬಾಲಕಿಯರನ್ನು ಭೇಟಿ ಮಾಡಲು ಬಂದ ಪುರುಷ ವ್ಯಕ್ತಿಅಪರಿಚಿತರುಎಂದು ತಿಳಿದುಬಂದಲ್ಲಿ ಆ ಬಾಲಕಿಯೊಂದಿಗೆ ಮಾತನಾಡಲು ಅವಕಾಶ ನೀಡಬಾರದು ಹಾಗೂ ಯಾವುದೇ ವಿಷಯವನ್ನು ಪ್ರಾಂಶುಪಾಲರೊಂದಿಗೆಚರ್ಚಿಸಲು ತಿಳಿಸುವುದು.

9) ವಸತಿ ಶಾಲೆಗಳಲ್ಲಿ ಬಾಲಕಿಯರ ಉಸ್ತುವಾರಿಗೆ ಕಡ್ಡಾಯವಾಗಿ ಮಹಿಳಾ ಸಿಬ್ಬಂದಿಯನ್ನು ನೇಮಿಸಲು ಕ್ರಮ ಕೈಗೊಳ್ಳಲು ತಿಳಿಸಲಾಗಿದೆ. ಬಾಲಕಿಯರ ವಸತಿ ನಿಲಯಕ್ಕೆ ಒಬ್ಬ ಮಹಿಳಾ ಶಿಕ್ಷಕರು/ನಿಲಯ ಮೇಲ್ವಿಚಾರಕರು/ಶುಶ್ರೂಷಕಿಯರುಗಳನ್ನು ಹೌಸ್ ಮಿಸ್ಟ್ರಸ್ ಎಂದು ನೇಮಿಸುವುದು ಕಡ್ಡಾಯವೆಂದು ತಿಳಿಸಲಾಗಿದೆ. ಒಂದು ವೇಳೆ ಆ ಶಾಲೆಯಲ್ಲಿ ಮಹಿಳಾ ಶಿಕ್ಷಕರು/ನಿಲಯ ಮೇಲ್ವಿಚಾರಕರು/ಶುಶ್ರೂಷಕಿಯರು ಇಲ್ಲದೆ ಇದ್ದರೆ ತಕ್ಷಣ ಈ ಮಾಹಿತಿಯನ್ನು ಮೇಲಿನ ಅಧಿಕಾರಿಗಳಿಗೆ ತಿಳಿಸಿ, ಮಹಿಳಾ ಸಿಬ್ಬಂದಿಯನ್ನು ತಮ್ಮ ಶಾಖೆಗೆ ಪಡೆಯುವ ಕುರಿತು ಕ್ರಮ ವಹಿಸುವುದು.

10) ಯಾವುದೇ ಕಾರಣಕ್ಕೂ ಬಾಲಕಿಯರು ಬಾಲಕರ ವಸತಿ ನಿಲಯದೊಳಗೆ ಪ್ರವೇಶ ಮಾಡುವಂತಿಲ್ಲ. ಒಂದು ವೇಳೆ ವಿದ್ಯಾರ್ಥಿನಿಯರು ತರಗತಿಯ ಹೊರಗಡೆ ಶಿಕ್ಷಕರನ್ನು ಮಾತನಾಡಿಸಬೇಕಾದ ಅವಶ್ಯಕತೆ ಬಿದ್ದರೆ ಮುಂಚಿತವಾಗಿ ನಿಲಯ ಮೇಲ್ವಿಚಾರಕಿಯ (ಹೌಸ್ ಮಿಸ್ಟ್ರಸ್) ಪ್ರಾಂಶುಪಾಲರ ಅನುಮತಿ ಪಡೆಯಬೇಕು.

11) ಯಾವುದೇ ಕಾರಣಕ್ಕೂ ಬಾಲಕರು, ಪುರುಷರು ಮತ್ತು ಪುರುಷ 'ಡಿ' ಗ್ರೂಪ್ ನೌಕರರು ಬಾಲಕಿಯರ ವಸತಿ ನಿಲಯದೊಳಗಡೆ ಪ್ರವೇಶಿಸುವಂತಿಲ್ಲ. ಒಂದು ವೇಳೆ ತುರ್ತು ಕೆಲಸ ಬಂದಲ್ಲಿ ನಿಲಯ ಮೇಲ್ವಿಚಾರಕಿಯರ (ಹೌಸ್ ಮಿಸ್ಟ್ರೆಸ್) ಅನುಮತಿ ಪಡೆದು ಮೇಲ್ವಿಚಾರಕಿಯರು (ಹೌಸ್ ಮಿಸ್ಟ್ರೆಸ್) ಬಾಲಕಿಯರ ವಸತಿ ನಿಲಯದೊಳಗಡೆ ಒಬ್ಬಳೇ ಬಾಲಕಿ ಇಲ್ಲದಿರುವುದನ್ನು ಖಾತರಿಪಡಿಸಿಕೊಂಡು ಅನುಮತಿ ನೀಡಬೇಕು.

12) ಪ್ರಾಂಶುಪಾಲರು ಮತ್ತು ಶಿಕ್ಷಕರು ಬಾಲಕಿಯರ ವಸತಿ ನಿಲಯವನ್ನು ಸಂದರ್ಶಿಸಬೇಕಾದರೆ ಮುಂಚಿತವಾಗಿ ಮೇಲ್ವಿಚಾರಕರಿಗೆ (ಹೌಸ್ ಮಿಸ್ಟ್ರೆಸ್) ತಿಳಿಸಿ, ನಿಲಯ ಮೇಲ್ವಿಚಾರಕರೊಂದಿಗೆ (ಹೌಸ್ ಮಿಸ್ಟ್ರೆಸ್) ಬಾಲಕಿಯರ ವಸತಿ ನಿಲಯದೊಳಗೆ ಪ್ರವೇಶಿಸಬೇಕು.